ಈಕ್ವಲ್ಲು ಅಂತ ಅನಿಸಿಬಿಡ್ತು. ಹಾಗಾಗಿ ದಾವಣಗೆರೆಯನ್ನ ಸಾರ್ಕ್ ರಾಷ್ಟ್ರಗಳ ಸಾಲಿಗೆ ಸೇರಿಸಿಬಿಟ್ಟೆ. ಇಂಥ ಲೋಕಲ್ ಕೇಂಬ್ರಿಡ್ಜ್‌ನ ಕಾರಿಡಾರಿನಲ್ಲಿ ನಾನು ಒಮ್ಮೆ ನಡೆಯುವಾಗ 'ರವೀ... ರವೀ... ರವಿ ನೀನು ಆಗಸದಿಂದ ಮರೆಯಾಗಿ ಹೋಗದೆ ನಿಲ್ಲು' ಎಂಬ 'ಹೊಸಬೆಳಕು' ಸಿನಿಮಾದ ಹಾಡು ಕೇಳತೊಡಗಿತು. ಅದನ್ನು ಹಾಡುತ್ತಿದ್ದವಳು ನನ್ನ ಕ್ಲಾಸ್ ಮೇಟ್. ತಕ್ಷಣ ಮೈ ಬೆವತಂತಾಯಿತು. ನನ್ನನ್ನೇ ವಾರೆಗಣ್ಣಿನಿಂದ ನೋಡುತ್ತ ಮೆಲುವಾಗಿ ಅದೇ ಸಾಲು ರಿಪೀಟ್ ಮಾಡುತ್ತಿದ್ದಳು. ಅಲ್ಲಿಯ ರವೀ ಅಂದರೆ ನಾನೇ ಎಂದು ತಿಳಿದುಹೋಯಿತು. ತಪ್ಪಿಸಿಕೊಂಡೆ. ಮತ್ತೆ ಮರುದಿನ. ಆಮೇಲೆ ದಿನವೂ ನಿಂತಲ್ಲಿ ಕೂತಲ್ಲಿ ಕಾಡತೊಡಗಿದಳು. ಏನು ಮಾಡುವುದು? ಹುಡುಗರು ಹುಡುಗಿಯರನ್ನು ಚುಡಾಯಿಸುವುದು ಅನಾದಿಕಾಲದಿಂದ ಬಂದ ರೂಲ್ಸು. ನನ್ನ ವಿಚಾರದಲ್ಲಿ ಇದು ಉಲ್ಟಾ ಆಗಿದೆಯಲ್ಲಾ. ಚಿ. ಉದಯಶಂಕರ್ ಮೇಲೆ ಕೋಪ ಬಂತು. ಇವರಿಗೆ ಬೇರೆ ಯಾವ ಹೆಸರೂ ಹಾಡು ಬರೆಯುವಾಗ ಹೊಳೆಯುವುದಿಲ್ಲವೆ? ರವೀ ಶಶಿ ಎಂದರೆ ಇಷ್ಟು ಸದರವಾ? 'ಬಸವರಾಜ... ನೀನು ಮರೆಯಾಗಿ ಹೋಗದೆ ನಿಲ್ಲು...' ಅಂತ ಯಾಕೆ ಬರೆಯಬಾರದು? ಅದೆಲ್ಲ ಆಗದ ಹೋಗದ ಮಾತು. ಹಾಗಂತ ಅವಳನ್ನು ಕೇಳಿದರೆ 'ಕುಂಬಳಕಾಯಿ ಕಳ್ಳ ಅಂದ್ರೆ...' ಅಂತ ಗ್ಯಾರಂಟಿ ಅನ್ನುತ್ತಾಳೆ. ಇದನ್ನು ಹೇಗಾದರೂ ನಿಲ್ಲಿಸಬೇಕೆಂದು ನನ್ನ ಮಿತ್ರ 'ಕೃಷ್ಣ ಸಂಧಾನ' ಮಾಡಿದ... ಜಗ್ಗಲಿಲ್ಲ. 'ಅವರೇ ಬಂದು ಹೇಳಲಿ' ಎಂದಳಂತೆ. ಸರಿ ಈ 'ಬೆಮರ್ದನುರಗ ಪತಾಕ' ಅವಳ ಮುಂದೆ ಬಿಜಯಂಗೈದು, ಅವಳು ಹೇಳಿದಂತೆ 'ಇನ್ನು ಮೇಲೆ ಹೆಣ್ಣು ಮಕ್ಕಳನ್ನು ಕಂಡರೆ ಮಾರು ದೂರ ಹೋಗುವುದಿಲ್ಲ. ಎಲ್ಲರ ಹಾಗೆ ಅವರೂ ಫ್ರೆಂಡ್ಸು. ಅವರನ್ನೂ ಮಾತನಾಡಿಸುವೆ' ಎಂದು ಅಶ್ಯೂರೆನ್ಸ್ ಕೊಟ್ಟು ಕಾಫಿ ಕುಡಿಸಿದ ಮೇಲೆ ನನಗೆ ಈ ಗ್ರಹಣ ಬಿಟ್ಟಿತು. ಈಗಲೂ 'ಹೊಸಬೆಳಕು' ಹಾಡು ಬಂದಲ್ಲಿ ಆಕಡೆ ಈಕಡೆ ತಿರುಗಿ ನೋಡುವಂತಾಗುತ್ತದೆ.

ಮುಂದೆ ಆಕಾಶವಾಣಿಯೆಂಬ ಆಕಾಶವಾಣಿಗೆ ಉದ್ಘೋಷಕನಾಗಿ ನಾನು ಬಂದು ಸೇರಲು ಅಲ್ಲಿಂದ ಹೊಸ ಪರ್ವವೊಂದು ಶುರುವಾಯಿತು. ನೂರಾರು ಚಿತ್ರಗೀತೆಗಳನ್ನು ನನಗೇ ಪ್ರಸಾರ ಮಾಡುವ ಅವಕಾಶ. ಅದನ್ನು ಹೇಗೆ ಪ್ರಸಾರ ಮಾಡುತ್ತೇವೆ ಎಂಬುದಂತೂ ಬಹಳ ಮುಖ್ಯವಾದ ಅಂಶ. ರಚನೆ ಮತ್ತು ಸಂಗೀತದಲ್ಲಿ ಸಾಮ್ಯತೆ ಇರುವ ಗೀತೆಗಳನ್ನೇ ಒಟ್ಟಾಗಿ ಬಿತ್ತರಿಸುವ ಪ್ರಯೋಗಶೀಲತೆ. ಉದಾಹರಣೆಗೆ 'ಅನುರೂಪ' ಚಿತ್ರದ 'ನೀನಿರುವುದು ನಿಜವಾದರೂ ನಿನ್ನ ಸಂಗ ಸಿಹಿಯಾದರೂ ಏಕಾಂಗಿ ನಾನು' ಹಾಡಿನ ನಂತರ ಯಾವುದೋ ಕೈಗೆ ಸಿಕ್ಕ ಹಾಡು ಹಾಕುವಂತಿಲ್ಲ. 'ನನ್ನ ಧಾಟಿಯ ನೀನರಿಯೇ ನನ್ನ ಹಾಡೇ ಬೇರೆ' ಎಂಬ ಹಾಡು ಅಲ್ಲಿ ಸೂಟ್ ಆಗುತ್ತೆ. ಇದರ ನಂತರ ಮೂರನೆಯ ಹಾಡು ಬೇಕಾದರೆ? ಅಲ್ಲಿರುವುದೇ ಸ್ವಾರಸ್ಯ. ಇದಕ್ಕಾಗಿ ದಿನಗಟ್ಟಲೆ ಹುಡುಕಾಟ, ಆಲೋಚನೆ. ಆಗ ದಿನವೂ ನೂರಿನ್ನೂರು ಪತ್ರಗಳು ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮಕ್ಕೆ ಬರುತ್ತಿದ್ದವು. ಒಬ್ಬನೇ ಶ್ರೋತೃ ಇಪ್ಪತ್ತು ಮೂವತ್ತು ಕಾರ್ಡುಗಳನ್ನು ಬರೆಯುವುದು, ದಯವಿಟ್ಟು ಪ್ರಸಾರ ಮಾಡಲೇಬೇಕು ಎಂದು ಬೇಡಿಕೊಳ್ಳುವವರು, ಪಕ್ಷಪಾತ ಮಾಡಬೇಡಿ ಎಂದು ವಾರ್ನ್ ಮಾಡುವವರು, ಇನ್ನೊಬ್ಬ ಕೇಳುಗರ ಹೆಸರು ಹೇಳಿ ಅವರಿಗ್ಯಾಕೆ ಇಂಪಾರ್ಟೆನ್ಸ್? ಎಂದು ಪ್ರಶ್ನಿಸುವವರು, ಜಗಳ ಮಾಡುವವರು, ಕವರಿನೊಳಗೆ ಐದು ಹತ್ತರ ನೋಟು ಇಟ್ಟು ಕಳಿಸುವವರು... ಹೀಗೆ ತರಹೇವಾರಿ ಕೇಳುಗರು. ಹಾಗೆ ದುಡ್ಡು ಇಟ್ಟು ಕಳಿಸುವವರ ವಿಳಾಸ ಹುಡುಕಿ ಅವರಿಗೆ ಮನಿ ಆರ್ಡರ್ ಮೂಲಕ ವಾಪಸ್ಸು ಮಾಡುವಲ್ಲಿ ಸಾಕುಬೇಕಾಗುತ್ತಿತ್ತು. ಈಗಲೂ ಉತ್ತರ ಭಾರತದ